# ‘ಇಲ್ಲಿನ ಪ್ರವಾಸಿ ತಾಣ ಅದ್ಭುತ!’

‘ಭಾರತದಲ್ಲಿರುವ ಪ್ರವಾಸಿ ತಾಣಗಳು ವೈವಿಧ್ಯಮಯ. ರಾಜಸ್ತಾನ, ದೆಹಲಿ, ಆಗ್ರಾ, ಗೋವಾ, ಮುಂಬಯಿ, ಪಾಂಡಿಚೇರಿ, ಊಟಿ, ಮೈಸೂರು ಮುಂತಾದ ಸ್ಥಳಗಳನ್ನು ನೋಡಿದ್ದೇವೆ. ಐತಿಹಾಸಿಕವಾಗಿರುವ ಈ ಎಲ್ಲ ತಾಣಗಳು ಬಹಳ ಚೆನ್ನಾಗಿವೆ. ನಾವು ನೋಡಿದ ಇಷ್ಟು ಪ್ರವಾಸಿ ತಾಣಗಳೂ ಒಂದಕ್ಕಿಂತ ಒಂದು ಭಿನ್ನ’.



ಫ್ರಾನ್ಸ್ ಮೂಲದ ಸೆಬಾಸ್ಟಿಯನ್, ಹಾಟ್ರನ್ ಮಕ್ಕಳಾದ ಮೈಲಿನ್ ಮತ್ತು ಖುವಾಕ್ ಟೋನ್

ಬಹುತೇಕ ಎಲ್ಲ ವಿದೇಶೀಯರಿಗೆ ಬೆಂಗಳೂರು ‘ಹೋಮ್ ಟೌನ್’ನಂತೆ. ಇಲ್ಲಿ ಅವರ ನಿರೀಕ್ಷೆಗೆ ತಕ್ಕಂತೆ ಎಲ್ಲವೂ ಇದೆ. ಶಿಕ್ಷಣ, ಉದ್ಯೋಗ, ಉದ್ಯಮದ ನಿಮಿತ್ತ ನಾನಾ ದೇಶಗಳಿಂದ ಇಲ್ಲಿಗೆ ಬರುವ ವಿದೇಶೀಯರು ‘ಇಲ್ಲಿ ಹೇಗಪ್ಪಾ ಇರೋದು’ ಎಂದು ಅಳುಕುತ್ತಲೇ ಬರುತ್ತಾರೆ. ಬಂದು ಕೆಲವೇ ತಿಂಗಳಲ್ಲಿ ತಮ್ಮ ಕುಟುಂಬವನ್ನೂ ಇಲ್ಲಿಗೆ ಕರೆತಂದು ಖಾಯಂ ಆಗಿ ನೆಲೆ ನಿಲ್ಲುವಷ್ಟು ಧೈರ್ಯವಂತರಾಗುತ್ತಾರೆ. ಇದಕ್ಕೆ ಕಾರಣ ಏನಿರಬಹುದು? ಭಾಷೆ, ಆಚರಣೆ, ಸಂಸ್ಕೃತಿ, ಸಂಪ್ರದಾಯ, ಆಹಾರ ಪದ್ಧತಿ, ಕಟ್ಟುಪಾಡುಗಳು ಎಲ್ಲವೂ ವಿಭಿನ್ನವಾಗಿದ್ದರೂ ಇಲ್ಲಿನ ಆಕರ್ಷಣೆ ಏನು?

ಕಾರಣ ಇಷ್ಟೆ. ಬೆಂಗಳೂರು ಐಟಿ ಹಬ್. ಔದ್ಯೋಗಿಕವಾಗಿ ಹೆಚ್ಚಿನ ಅವಕಾಶಗಳಿವೆ, ಮಕ್ಕಳಿಗೆ ಶಿಕ್ಷಣ ವ್ಯವಸ್ಥೆ ಅನುಕೂಲವಾಗಿದೆ, ಹವಾಮಾನ ಚೆನ್ನಾಗಿದೆ, ಆಹಾರ ಕ್ರಮ ಬೇಗನೆ ಒಗ್ಗಿಕೊಳ್ಳುವಂತಿದೆ, ಮೇಲಾಗಿ ಜಗತ್ತಿನ ಎಲ್ಲ ತರದ ಅಡುಗೆಗಳೂ ಲಭ್ಯ. ಈ ಎಲ್ಲ ಪ್ಲಸ್ ಪಾಯಿಂಟ್‌ಗಳು ವಿದೇಶೀಯರನ್ನು ನಮ್ಮಲ್ಲಿಗೆ ಕೈಬೀಸಿ ಕರೆಯುತ್ತಿವೆ.

ಹಾಗೆ ಬಂದವರು ಫ್ರಾನ್ಸ್ ಮೂಲದ ಸೆಬಾಸ್ಟಿಯನ್ ದುರನ್ ಮತ್ತು ಅವರ ಪತ್ನಿ ಹಾಟ್ರನ್ ದುರನ್. ಮಕ್ಕಳಾದ ಮೈಲಿನ್ ಮತ್ತು ಖುವಾಕ್ ಟೋನ್. ಕಳೆದ ಎರಡು ವರ್ಷಗಳಿಂದ ಈ ಕುಟುಂಬ ಬೆಂಗಳೂರಿನಲ್ಲಿ ನೆಲೆಸಿದೆ. ಪತಿ ಪತ್ನಿ ಇಬ್ಬರೂ ವೃತ್ತಿಯಿಂದ ಎಂಜಿನಿಯರ್‌ಗಳು. ಸೆಬಾಸ್ಟಿಯನ್ ವಾಹನ ತಯಾರಿಕಾ ಕಂಪೆನಿಯಲ್ಲಿ ಗ್ರೂಪ್ ಮ್ಯಾನೇಜರ್ ಆಗಿದ್ದರೆ ಹಾಟ್ರನ್ ಎಲ್‌ಜಿಎಂ ಎಂಜಿನಿಯರಿಂಗ್ ಇಂಡಿಯಾ ಕಂಪೆನಿಯಲ್ಲಿ ಮ್ಯಾನೇಜರ್. ಸೆಬಾಸ್ಟಿಯನ್ ಕಂಪೆನಿಗೆ ಫ್ರಾನ್ಸ್ ಮೂಲದವರೇ ಬೇಕಾಗಿದ್ದುದು ಇವರನ್ನು ಬೆಂಗಳೂರಿಗೆ ಕರೆಸಿಕೊಳ್ಳಲು ಕಾರಣವಾಯಿತಂತೆ.

‘ಇಲ್ಲಿ ಕೆಲಸದ ವಾತಾವರಣ ಚೆನ್ನಾಗಿದೆ. ವಿದೇಶಿ ಮೂಲದ ಕಂಪೆನಿ ಆಗಿರುವುದರಿಂದ ಬಹುತೇಕ ಉದ್ಯೋಗಿಗಳು ಯೂರೋಪ್, ಫ್ರಾನ್ಸ್ ಕಡೆಯಿಂದ ಬಂದವರೇ ಇದ್ದಾರೆ. ಹೀಗಾಗಿ ನಾವು ದೇಶ ಬಿಟ್ಟು ಬಹಳ ದೂರ ಬಂದಿದ್ದೇವೆ ಎಂದು ಅನಿಸುವುದೇ ಇಲ್ಲ ಎನ್ನುವ ಸೆಬಾಸ್ಟಿಯನ್, ಬೆಂಗಳೂರಿಗೆ ಬಂದ ಹೊಸದರಲ್ಲಿ ಇಲ್ಲಿ ಕೆಲಸ ಮಾಡುವುದು ದೊಡ್ಡ ಸವಾಲು ಎನಿಸಿತ್ತು. ಈಗ ಎಲ್ಲವೂ ಸರಿಹೋಗಿದೆ, ಕೆಲಸದ ವಾತಾವರಣಕ್ಕೆ ಚೆನ್ನಾಗಿ ಹೊಂದಿಕೊಂಡಿದ್ದೇನೆ’ ಎನ್ನುತ್ತಾರೆ.

ಇಲ್ಲಿನ ಸಹೋದ್ಯೋಗಿಗಳು ಸ್ನಾತಕೋತ್ತರ ಪದವೀಧರರಾಗಿದ್ದು, ಕೆಲಸದಲ್ಲಿ ಚುರುಕು, ಬುದ್ಧಿವಂತಿಕೆಯೂ ಮೆಚ್ಚುವಂಥದ್ದೆ. ತಾತ್ವಿಕ ಅಂಶಗಳನ್ನು ಬೇಗನೆ ಅರಿತುಕೊಳ್ಳುತ್ತಾರೆ. ಆದರೆ ಪ್ರಾಯೋಗಿಕ ಅಂಶಗಳಲ್ಲಿ ವಿದೇಶೀ ಕೆಲಸಗಾರರಿಗಿಂತ ಒಂದು ಹೆಜ್ಜೆ ಹಿಂದೆ ಇದ್ದಾರೆ ಎಂದೇ ಹೇಳಬಹುದು ಎಂದು ತುಲನಾತ್ಮಕವಾಗಿ ವಿವರ ನೀಡುತ್ತಾರೆ ಸೆಬಾಸ್ಟಿಯನ್.

ಹಾಟ್ರನ್ ಕೆಲಸ ಮಾಡುವ ಕಂಪೆನಿಯಲ್ಲಿ ಅವರ ಸಹೋದ್ಯೋಗಿಗಳು ಎಲ್ಲರೂ ವೃತ್ತಿನಿಪುಣರಂತೆ. ಯಾವ ಕೆಲಸವಾದರೂ ಸರಿ, ಚೆನ್ನಾಗಿ ಸಹಕರಿಸುತ್ತಾರಂತೆ. ಅಲ್ಲದೆ ಹಾಟ್ರನ್ ಅವರು ಫ್ರಾನ್ಸ್‌ನಲ್ಲಿ ಕೆಲಸ ಮಾಡುತ್ತಿರುವಾಗ ಅಲ್ಲಿ ಭಾರತೀಯ ಸಹೋದ್ಯೋಗಿಗಳೂ ಇದ್ದರಂತೆ. ಹೀಗಾಗಿ ಇವರಿಗೆ ಭಾರತೀಯರ ಜತೆಗೆ ಕೆಲಸ ಮಾಡಿದ ಎಲ್ಲ ಅನುಭವಗಳೂ ಇರುವುದರಿಂದ ಇಲ್ಲಿನ ಕಾರ್ಯ ನಿರ್ವಹಣೆ ಸುಲಲಿತವಾಯಿತಂತೆ.

## ಸ್ನೇಹಪರರು

‘ಇಲ್ಲಿನ ಜನ ಬಹಳ ಹೊಂದಾಣಿಕೆ ಸ್ವಭಾವದವರು. ಸ್ನೇಹಪರರು. ಯಾವುದೇ ಸಹಾಯಕ್ಕೂ ತಯಾರಿರುತ್ತಾರೆ. ಭಾವನಾತ್ಮಕವಾಗಿ ಸ್ಪಂದಿಸುತ್ತಾರೆ. ಇದು ನಮಗೆ ಖುಷಿ ತಂದಿದೆ’ ಎನ್ನುತ್ತಾರೆ ಈ ದಂಪತಿ.

‘ಇಲ್ಲಿನ ಊಟ ತಿಂಡಿ ಬಹಳ ರುಚಿಕರ. ಬಿಡುವು ಸಿಕ್ಕಿದಾಗ ಹೋಟೆಲ್‌ಗೆ ಹೋಗುತ್ತೇವೆ. ಶಾಪಿಂಗ್‌ಗೂ ಹೋಗುತ್ತೇವೆ, ಮಾಲ್‌ಗಳಲ್ಲಿ ಅಡ್ಡಾಡುತ್ತೇವೆ. ಆದರೆ ಟ್ರಾಫಿಕ್ ಕಿರಿಕಿರಿಯಿಂದ ಹೊರಗೆ ಹೋಗಲು ಇಷ್ಟವಾಗುತ್ತಿಲ್ಲ. ಕಾರಿನಲ್ಲಿ ಹೋಗುವುದಾದರೂ ರಸ್ತೆಯಲ್ಲಿ ಬಹಳ ಸಮಯ ವ್ಯಯವಾಗುತ್ತದೆ. ಫ್ರಾನ್ಸ್‌ನಲ್ಲಿ ಇಷ್ಟೊಂದು ಟ್ರಾಫಿಕ್ ಕಿರಿಕಿರಿ ಇಲ್ಲವೇ ಇಲ್ಲ’ ಎಂದು ಹೇಳುತ್ತಾರೆ ಹಾಟ್ರನ್.

‘ಭಾರತದಲ್ಲಿರುವ ಪ್ರವಾಸಿ ತಾಣಗಳು ಅದ್ಭುತ. ರಾಜಸ್ತಾನ, ದೆಹಲಿ, ಆಗ್ರಾ, ಗೋವಾ, ಮುಂಬಯಿ, ಪಾಂಡಿಚೇರಿ, ಊಟಿ, ಮೈಸೂರು ಮುಂತಾದ ಸ್ಥಳಗಳನ್ನು ನೋಡಿದ್ದೇವೆ. ಐತಿಹಾಸಿಕವಾಗಿರುವ ಈ ಎಲ್ಲ ತಾಣಗಳು ಬಹಳ ಚೆನ್ನಾಗಿವೆ. ನಾವು ನೋಡಿದ ಇಷ್ಟು ಪ್ರವಾಸಿ ತಾಣಗಳೂ ಒಂದಕ್ಕಿಂತ ಒಂದು ಭಿನ್ನ’ ಎಂಬುದು ಈ ದಂಪತಿಗಳ ಅಭಿಪ್ರಾಯ.

ಮಕ್ಕಳಾದ ಮೈಲಿನ್ ಮತ್ತು ಖುವಾಕ್ ಟೋನ್ ನರ್ಸರಿ ತರಗತಿಗಳಲ್ಲಿದ್ದು, ಶಾಲಾ ಜೀವನವನ್ನು ಬಹಳ ಇಷ್ಟಪಡುತ್ತಾರೆ. ಶಾಲೆಯಲ್ಲಿ ತುಂಬ ಸ್ನೇಹಿತರಿದ್ದು, ಎಂಜಾಯ್ ಮಾಡುತ್ತಾರಂತೆ. ಇತರ ಪಠ್ಯೇತರ ಚಟುವಟಿಕೆಗಳಾದ ಈಜು, ಪಿಯಾನೊ ಇವರಿಬ್ಬರಿಗೂ ಬಹಳ ಇಷ್ಟವಂತೆ. ಆದರೆ ಹೋಮ್‌ವರ್ಕ್ ಮಾತ್ರ ಬೇಸರವಂತೆ.

★ ಅವನೀಶ್